ಓ.ಎಸ್. ನಂ. **76/2019** ಡಿ.ಡಬ್ಲ್ಯೂ- **1**

<u>ಸಾಕ್ಷಿಯನ್ನು ದಿನಾಂಕ **2.1.2023** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ನಿಡಿ 31 ರಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲಾಗಿದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ31 ರಲ್ಲಿ ದಾವಾಸ್ವತ್ತು ನನ್ನ ತಾಯಿ ಪಾಲಿಗೆ ಬಂದಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನನ್ನ ತಾಯಿ ಭಾಗಕ್ಕೆ ಬಂದಿರುವ ಸ್ವತ್ತು ಮತ್ತು ದಾವಾಸ್ವತ್ತು ಒಂದೇ ಅಗಿರುತ್ತದೆ ಎಂದರೆ ಸರಿ. ಮುತ್ತುಸ್ವಾಮಿ ರವರ ಹೇಳಿಕೆಯಂತೆ ದಾವಾಸ್ವತ್ತು ನನ್ನ ತಾಯಿ ಹೆಸರಿಗೆ ಬಂದಿರುತ್ತದೆ, ಅದು ಸತ್ಯವಾಗಿರುತ್ತದೆ, ನಿಡಿ31 ರಂತೆ ಅದು ಪಿತ್ರಾರ್ಜಿತ ಸ್ವತ್ತು ಆಗಿರುವುದಿಲ್ಲ. ನಿಡಿ10 ರಲ್ಲಿರುವ ಮುತ್ತುಸ್ವಾಮಿಯ ಸಹಿ ಮತ್ತು ವಾದಿಯ ವಕಾಲತ್ತುನಲ್ಲಿರುವ ಮುತ್ತುಸ್ವಾಮಿ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಿಡಿ8 ರಲ್ಲಿರುವ ಮುತ್ತುಸ್ವಾಮಿಯ ಸಹಿ ಮತ್ತು ವಾದಿಯ ವಾದಪತ್ರದಲ್ಲಿರುವ ಮುತ್ತುಸ್ವಾಮಿ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸಹಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಅಭಿಪ್ರಾಯ ಪಡೆದುಕೊಳ್ಳಲು ನನ್ನ ತಕರಾರು ಇರುವುದಿಲ್ಲ ಎಂದರೆ ಸರಿ. ನಾನು ಮುತ್ತುಸ್ವಾಮಿ ವಾದಿಯಾಗಿರುವುದಿಲ್ಲ, ಆತ ಬೇರೆ ವ್ಯಕ್ತಿಯಾಗಿರುತ್ತಾನೆ, ಆತನ ಭಾವಚಿತ್ರ ಇರುವುದಿಲ್ಲ, ವಿಳಾಸ ಗೊತ್ತಿರುವುದಿಲ್ಲ, ಆತ ಜೀವಂತ ಇರುವ ಬಗ್ಗೆ ಗೊತ್ತಿರುವುದಿಲ್ಲ, ಆತನನ್ನು ಸಾಕ್ಷಿಯಾಗಿ ಕರೆತರಲು ಸಾಧ್ಯವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ನನ್ನ ವಿಚಾರಣೆ ಪೂರ್ವದಲ್ಲಿ ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ನುಡಿಯಲು ಆಕೆಯಿಂದ ಸಾಮಾನ್ಯ ಅಧಿಕಾರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮುತ್ತುಸ್ವಾಮಿ ಸ್ವಾಧೀನ ನೀಡುವ ಮೊದಲೇ ನನ್ನ ತಾಯಿ ಸ್ವಾಧೀನದಲ್ಲಿದ್ದರು. ನಾವು ಯಾವುದೇ ದಾಖಲೆ ಮೂಲಕ ಉಳುಮೆ ಮಾಡುತ್ತಿರಲಿಲ್ಲ. ಮುತ್ತುಸ್ವಾಮಿ ಮನೆ ಬಿಟ್ಟು ಹೋದಾಗ 25-26 ವರ್ಷವಾಗಿತ್ತು. ಆತ 2004-05 ರಲ್ಲಿ ಮನೆ ಬಿಟ್ಟು ಹೋಗಿರುತ್ತಾನೆ.

ತಮಿಳುನಾಡಿನಲ್ಲಿ ಕಾಳಿಯಣ್ಣನ್ ಎಂಬ ಅನೇಕ ವ್ಯಕ್ತಿಗಳು ಇರುತ್ತಾರೆ ಎಂದರೆ ಸರಿ. ಮುತ್ತುಸ್ವಾಮಿ ರವರನ್ನು ತಮಿಳುನಾಡಿನಲ್ಲಿ ಕಾಳಿಯಣ್ಣನ್ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಮುತ್ತುಸ್ವಾಮಿ ರವರ ತಂದೆ ಹೆಸರು ತಿಳಿದಿರುವುದಿಲ್ಲ, ಸಾಕ್ಷಿ ಮುಂದುವರಿದು ನನಗೆ ಆತನ ಬಗ್ಗೆ ತಿಳಿದಿರುವುದಿಲ್ಲ, ನನ್ನ ತಂದೆಗೆ ತಿಳಿದಿತ್ತು ಎನ್ನುವರು.

ವಾದಿ ನನ್ನ ಅತ್ತೆ ಮಗನಾಗಬೇಕು. ವಾದಿ ತಂದೆ ದಾವೆ ಹೂಡಿದ ನಂತರ 2019 ರಲ್ಲಿ ಚಿಕ್ಕಪಡುವನಕೋಟೆ ಗ್ರಾಮದಲ್ಲಿ ನಿಧನರಾಗಿರುತ್ತಾರೆ ಎಂದರೆ ಸರಿ. ಚಿಕ್ಕಪಡುವನಕೋಟೆ ಮತ್ತು ಹೆಚ್.ಡಿ.ಕೋಟೆ ತಾಲ್ಲೂಕಿನ ಕೆ.ಎಡತೊರೆ ಗ್ರಾಮ ಅಕ್ಕಪಕ್ಕದ ಗ್ರಾಮವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತು ಕೆ.ಎಡತೊರೆ ಗ್ರಾಮದಲ್ಲಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದರೆ ಮಾತ್ರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುತ್ತದೆ ಎಂದರೆ ಸರಿ.

ಮುತ್ತುಸ್ವಾಮಿ ಒಬ್ಬನೇ ಮಗನಾಗಿರುತ್ತಾನೆ. ವಾದಿಯ ತಂದೆ ಹೆಸರು ನಯನಗೌಂಡರ್ ಆಗಿರುತ್ತದೆ. ವಾದಿಯ ತಂದೆ ಪಳನಿಯಮ್ಮ ಮತ್ತು ಅರ್ಕಾಣಿಯಮ್ಮ ರವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ಪಳನಿಯಮ್ಮ ರವರ ಮೂಲಕ ವಾದಿ ಮತ್ತು ತಂಗಮಣಿ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಅರ್ಕಾಣಿಯಮ್ಮ ಮೂಲಕ ಕಾಳಿದಾಸ ಮತ್ತು ಮಂಜುನಾಥ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ವಾದಿಯ ನಿಜವಾದ ಹೆಸರು ಕಾಳಿಯಣ್ಣನ್ ಆಗಿರುತ್ತದೆ, ಆತ ಮುತ್ತುಸ್ವಾಮಿ ಎಂದು ಸುಳ್ಳಾಗಿ ಸೇರಿಸಿಕೊಂಡಿರುತ್ತಾನೆ ಎನ್ನುವರು. ಚಿಕ್ಕಪಡುವನಕೋಟೆ ಗ್ರಾಮದಲ್ಲಿ ಮುತ್ತುಸ್ವಾಮಿ ಅಲಿಯಾಸ್ ಕಾಳಿಯಣ್ಣನ್ ಗೌಂಡರ್ ಬಿನ್ ನಯನಗೌಂಡರ್ ಎಂಬ ಬೇರೆ ವ್ಯಕ್ತಿ ಇರುವುದಿಲ್ಲ ಎಂದರೆ ಸರಿ. ವಾದಿಯ ಹೆಂಡತಿ ತಮಿಳುನಾಡಿನಲ್ಲಿರುವ ಕಾರಣ ಆತ ತಮಿಳುನಾಡಿನಲ್ಲಿ ವ್ಯಾಪಾರ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಾದಿ ಮುತ್ತುಸ್ವಾಮಿ ಅಲಿಯಾಸ್ ಕಾಳಿಯಣ್ಣನ್ ಗೌಂಡರ್ ಎಂಬ ಎರಡು ಹೆಸರಿನಲ್ಲಿ ಗುರುತಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿಗೆ ನ್ಯಾಯಾಲಯಕ್ಕೆ ನೀಡಿರುವ ಬ್ಯಾಂಕ್ ಪಾಸಪುಸ್ತಕದ ಬಗ್ಗೆ ತಿಳಿದುಕೊಂಡಿರುತ್ತೇನೆ. ಆತ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಮುತ್ತುಸ್ವಾಮಿ ಅಲಿಯಾಸ್ ಕಾಳಿಯಣ್ಣನ್ ಗೌಂಡರ್ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿರುವ ಮುತ್ತುಸ್ವಾಮಿ ವಾದಿ ಆಗಿರುತ್ತಾನೆ ಎಂದರೆ ಸರಿಯಲ್ಲ. ವಾದಿ ಹೆಚ್ಚಾಗಿ ತಮಿಳುನಾಡಿನಲ್ಲಿ ವ್ಯಾಪಾರ ಮಾಡುತ್ತಿದ್ದ ಕಾರಣ ದಾವಾಸ್ವತ್ತನ್ನು ನನ್ನ ತಂದೆಗೆ ಅರ್ಧ ಬೆಳೆಯಂತೆ ಗುತ್ತಿಗೆಗೆ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಕೆಲವು ಖಾಲಿ ದಾಖಲೆಗೆ ವಾದಿ ಸಹಿಯನ್ನು ಪಡೆದುಕೊಂಡು, ಅದನ್ನು ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಖಾತೆ ಮಾಡಿಸಿ ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.